OS 117/2019

ಡಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 04-02-2026**

ಮುಂದುವರಿದ ಪಾಟೀ ಸವಾಲು : ವಾದಿ ಪರಃ ಶ್ರೀ ಎಸ್.ಎಸ್.ಎ. ವಕೀಲರಿಂದಃ

ದಾವಾ ಆಸ್ತಿಯ ಪಶ್ಚಿಮಕ್ಕೆ ಮುಸ್ಲಿಂ ಸಮೂದಾಯದ ಒಬ್ಬರ ಆಸ್ತಿ ಇದ್ದು, ಅವರ ಹೆಸರು ಗೊತ್ತಿರುವುದಿಲ್ಲ ಅವರು ಈಗ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಅವರು ಅವರ ಜಾಗದ ರಸ್ತೆಯಲ್ಲಿಯೇ ಹೋಗುತ್ತಿದ್ದರು. ನನ್ನ ಆಸ್ತಿಗೆ ಬರುವ ಉತ್ತರದಲ್ಲಿ ಇರುವ ಮುಖ್ಯ ರಸ್ತೆಗೆ ಈದು ಕೇರಾ ಎಂದು ಕರೆಯುತ್ತಾರೆ. ಸಾಕ್ಷಿಗೆ ಈಗ ಒಂದು ಭಾವಚಿತ್ರ ತೋರಿಸಲಾಗಿ ಅದರಲ್ಲಿರುವ ರಸ್ತೆ ಈದು ಅಲಿಮಾರು ಗುಡ್ಡೆ ರಸ್ತೆ ಎಂದರೆ ಸಾಕ್ಷಿ ಒಪ್ಪಿರುವುದಿಲ್ಲ. ಸಾಕ್ಷಿಗೆ ಈಗ ಇನ್ನೊಂದು ಭಾವಚಿತ್ರ ತೋರಿಸಲಾಗಿ ಅದರಲ್ಲಿ ಕಂಡುಬರುವ ಮಣ್ಣು ರಸ್ತೆ ನಿಮ್ಮ ಸ್ಥಿರಾಸ್ತಿಗೆ ಹೋಗುವ ರಸ್ತೆ ಎಂದರೆ ಸಾಕ್ಷಿ ಒಪ್ಪಿರುವುದಿಲ್ಲ. ಮುಖ್ಯ ರಸ್ತೆಯಿಂದ ನಮ್ಮ ಆಸ್ತಿಗೆ ಹೋಗಲು ಪಶ್ಚಿಮಕ್ಕೆ ಮಣ್ಣಿನ ರಸ್ತೆ ಇದೆ ಎಂದರೆ ಸರಿಯಲ್ಲ. ಸದ್ರಿ ಮಣ್ಣಿನ ರಸ್ತೆ ಉತ್ತರದಿಂದ ದಕ್ಷಿಣವಾಗಿ ನಮ್ಮ ಆಸ್ತಿಯ ಪಶ್ಚಿಮದಲ್ಲಿ ಹಾದುಹೋಗುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ವಾದಿ ತನ್ನ ವಾದ ಪತ್ರದ ಕಂಡಿಕೆ 3(ಬಿ) ಯಲ್ಲಿ ಕಾಣಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಡಿ-4 ದಾಖಲೆಯ ಪ್ರಕಾರ ಸತೀಶ್ ಪೂಜಾರಿ ಯವರು ನನಗೆ 1 ಸೆಂಟ್ಸು ಜಾಗವನ್ನು ರಸ್ತೆಗಾಗಿ ಕೊಟ್ಟಿದ್ದರೆ ಪುನಃ ಅದನ್ನು 2014 ರಲ್ಲಿ ವಾದಿಗೆ ಆದ ಕ್ರಯ ಸಾಧನದಲ್ಲಿ ನಮೂದಿಸುತ್ತಿರಲಿಲ್ಲ ಎಂದರೆ ಗೊತ್ತಿಲ್ಲ.

ನನ್ನ ದಾವಾ ಆಸ್ತಿಗೆ ಹೋಗಲು ಪಶ್ಚಿಮದಲ್ಲಿ ಪರ್ಯಾಯ ರಸ್ತೆ ಇದೆ ಎಂದರೆ ಸರಿಯಲ್ಲ. ಈ ಕುರಿತು ನ್ಯಾಯಾಲಯದ ಆಯುಕ್ತರ ಮೂಲಕ ಸ್ಥಳ

ತನಿಖೆ ಮಾಡಲು ನಿಮ್ಮ ಆಕ್ಷೇಪಣೆ ಇದೆಯಾ ಎಂದರೆ ಇಲ್ಲ. ನನ್ನ ಸ್ಥಿರಾಸ್ತಿಯ ನೆರೆಕರೆಯ ಜನರೂ ಕೂಡಾ ನನ್ನ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ರಸ್ತೆಯನ್ನು ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಸಾಧನೆ ಮಾಡುತ್ತಿರುವಂತೆ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ